ಆದ್ರೆ, ನೀನು ಇದರ ಕುರಿತು ದೀರ್ಘವಾಗಿ ಬರಿ' ಅಂದರು. ಇದಾದ ನಂತರವೂ ಅವರು ನಮ್ಮ ಮನೆಗೆ ಅನೇಕ ಸಲ ಬಂದಿದ್ದಾರೆ, ಪ್ರೀತಿಯಿಂದ ನಮ್ಮೊಡನೆ ಕುಳಿತು ಊಟ ಮಾಡಿದ್ದಾರೆ. ನಮ್ಮ ನಡುವಿನ ಆಲೋಚನೆಯ ಭಿನ್ನತೆಗಳ ನಡುವೆಯೂ ಒಂದು ಆರೋಗ್ಯಕರ ಸಂಬಂಧವನ್ನು ಉಳಿಸಿಕೊಳ್ಳುವುದು ಮತ್ತು ಭಿನ್ನಾಭಿಪ್ರಾಯಗಳು ಯಾವತ್ತೂ ದ್ವೇಷಕ್ಕೆ ಎಡೆಮಾಡಿಕೊಡದ ಹಾಗೆ ಬದುಕುವುದು ಹೇಗೆ ಎಂಬುದಕ್ಕೆ ಈ ಘಟನೆ ನನ್ನ ಮನಸ್ಸಿನಲ್ಲಿ ನೆಲೆ ನಿಂತಿದೆ.

'ಉತ್ತರಾಯಣ' ಕವನ ಸಂಕಲನದ ಎಚ್‌ಎಸ್‌ವಿ ಅವರ ಆರಂಭಿಕ ಮಾತುಗಳು ಅಯಾಚಿತವಾಗಿ ನೆನಪಾಗುತ್ತಿವೆ: 'ಸ್ನೇಹ ಎಂಬ ಪದದ ಅರ್ಥವೇ ಅಂಟು ಎಂದು. ಸ್ನೇಹ, ಪ್ರೀತಿ, ವಾತ್ಸಲ್ಯ, ಭಕ್ತಿ, ಅಭಿಮಾನ ಎಲ್ಲವೂ ಇಂಥ ಅಂಟುಗಳೇ... ಲಯದಿಂದ ಪಾರಾಗುವುದಕ್ಕೆ ಇರುವ ಒಂದೇ ದಾರಿ ಹೊಸಲಯವೊಂದನ್ನು ಕಂಡುಕೊಳ್ಳುವುದು... ನಾವೇ ನಿರ್ಮಿಸುವ ಅಂಟೆಂಬ ಭಾವದ್ರವ್ಯಕ್ಕೆ ಅಂಟಿಕೊಂಡ ನಂತರ, ತನ್ನದೇ ಆದ ಒಂದು ವಿಶೇಷ ಶಕ್ತಿ ಪ್ರಾಪ್ತವಾಗುತ್ತದೆ ಎಂಬುದನ್ನೂ ನಾವು ಮರೆಯಬಾರದು. ಬಿಡಿಬಿಡಿಯಾಗಿದ್ದ ಎರಡು ಹಾಳೆಗಳನ್ನು ನಾವು ಅಂಟಿಸುತ್ತೇವೆ. ಹಾಳೆಗಳನ್ನು ಬಿಡಿಸಬೇಕೆಂದರೆ ಅಂಟು ಇನ್ನೂ ಗಟ್ಟಿಯಾಗಿ ಕಚ್ಚಿಕೊಳ್ಳುವ ಮೊದಲೇ ಬಿಡಿಸಬೇಕು. ಆಮೇಲೆ ಬಿಡಿಸುವ ಯತ್ನ ಮಾಡಿದರೂ ಅಂಟು ಬಲವಾಗಿ ಎರಡು ಹಾಳೆಗಳನ್ನು ಒಕ್ಕಟ್ಟಿನಲ್ಲಿ ಹಿಡಿದಿಟ್ಟಿರುತ್ತದೆ. ಕಾಲದ ಹಳಮೆ, ನಿರಂತರ ಹೊಕ್ಕಾಟ, ಅನಿವಾರ್ಯವಾದ ಭೌತಿಕ ಮಾನಸಿಕ ಅಗತ್ಯಗಳಿಂದ ಅಂಟುಗಳು ಎರಡು ವಿಭಿನ್ನ ಜೀವಿಗಳನ್ನು ಒಕ್ಕಟ್ಟಿನಲ್ಲಿ ಹಿಡಿದಿಡುತ್ತದೆ. ಆದುದರಿಂದಲೇ ನಮ್ಮ ಭಾವಲೋಕ ಒಂದು ಅಂಟಿನ ಲೋಕವಾಗಿದೆ. ನಮಗೂ ನಿಮಗೂ ಅಂಟಿದ ನಂಟು ಎಂದೂ ಭಗ್ನಗೊಳ್ಳದಿರಲೆಂಬುದೇ ನಮ್ಮ ಸಂಕಲ್ಪವಾಗಿದ್ದಲ್ಲಿ, ಆ ಸಂಕಲ್ಪವೇ ನಮ್ಮ ಭಾಷೆಯನ್ನೂ, ಸಮಾಜವನ್ನೂ, ದೇಶವನ್ನೂ, ಜಗತ್ತನ್ನೂ, ಕೊನೆಗೆ ನಮ್ಮ ಅಂಗೈ ಅಗಲದ ಅರಳಿಯೆಲೆಸಂಸಾರವನ್ನೂ ಒಡೆದು ಹೋಗದಂತೆ ಕಾಪಾಡಬಲ್ಲುದೇನೋ...'

ಒಂದು ಅಂಟಿನ-ನಂಟಿನ ಹಿಂದೆ ಎಷ್ಟೊಂದು ಕಾಳಜಿಗಳು! ನಂಟಿನ ಬಗ್ಗೆ ಇಷ್ಟೆಲ್ಲ ಮಾತಾಡಿದ ಮೇಲೆ 'ತನ್ನ ಮಾತೆಲ್ಲ ಕವಿತೆಯೇ ಎನ್ನುವ ಬೇಂದ್ರೆ'ಯವರ ನನಗೂ ನಿನಗೂ ಅಂಟಿದ ನಂಟಿನ/ ಕೊನೆ ಬಲ್ಲವರಾರು ಕಾಮಾಕ್ಷಿಯೆ! ಸಾಲುಗಳು ನೆನಪಾಗುವುದು ಸಹಜವೇ ತಾನೆ? ಎಚ್‌ಎಸ್‌ವಿ ಅವರ 'ಉತ್ತರಾಯಣ' ಕವಿತೆಗೂ, ಬೇಂದ್ರೆಯವರ 'ಸಖೀಗೀತ'ಕ್ಕೂ ಇರುವ ಸಾಮ್ಯದ ಕುರಿತು ಈಗಾಗಲೇ ಚರ್ಚೆಗಳಾಗಿವೆ. 'ಉತ್ತರಾಯಣ' ನನ್ನ ಇಷ್ಟದ ಕವಿತೆಗಳಲ್ಲಿ ಒಂದು. ದಾಂಪತ್ಯವು ಕೇವಲ ಶೃಂಗಾರರಸದ ವರ್ತುಲವಲ್ಲ. ಅದು



ಚಿತ್ರ: ಪ್ರಶಾಂತ್ ಎಚ್‌.ಜಿ.

ಮಾನವೀಯ ಕಾರುಣ್ಯ, ಕಷ್ಟಗಳ ಕೊಡು-ಕೊಳುವಿಕೆ, ಕೌಟುಂಬಿಕ ವಾತ್ಸಲ್ಯ ಇತ್ಯಾದಿ ಹತ್ತಾರು ಭಾವಗಳ ವಿಶಾಲ ಭೂಮಿಕೆ. ತಮ್ಮ ಹೆಂಡತಿ ತೀರಿಕೊಂಡಾಗ ಎಚ್‌ಎಸ್‌ವಿ ಬರೆದ ಕವನ ಇದು. ಈ ಚೌಕಟ್ಟನ್ನು ಮೀರಿ ಕವಿತೆ ಬೆಳೆಯುವುದೇ ಇದರ ಸಿದ್ಧಿ. ಇದು ಎಲ್ಲರ ಒಳಗಿನ ಕಳೆದುಕೊಳ್ಳುವ ಭಾವ, ತಾಕಲಾಟ, ಸಂಕಟ, ನೆನಪುಗಳ ಮೆರವಣಿಗೆ, ಮುನ್ನೋಟದ ಟಿಸಿಲುಗಳನ್ನು ಚಿತ್ರಿಸುತ್ತದೆ. ಯಾಕೆಂದರೆ ಆತ್ಮಾವಲೋಕನ ಇಲ್ಲಿ ಸ್ಥಾಯಿ, ಈಗ ನನ್ನ ನಾಟಕದಲ್ಲಿ ನಾನೇ ಅಭಿನೇತೃ, ನಾನೇ ಪ್ರೇಕ್ಷಕ./ ನೋಡುತ್ತಿದ್ದೇನೆ ನನ್ನನ್ನ ನಾನೇ... ಎನ್ನುತ್ತ ಶುರುವಾಗುವ ಕವಿತೆಯು ಸೃಷ್ಟಿಸಿಕೊಂಡಿರುವ